1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C. 98/2023

PW- 25

CW- 52

ಪ್ರ. ಬೋ. ದಿನಾಂಕಃ 05-05-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಗಣೇಶ |
| ತಂದೆ/ ಗಂಡನ ಹೆಸರು | : | ದೇವೇಂದ್ರಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಪೇಂಟರ್ |
| ವಾಸ | : | ಬಾಂಗ್ಲಾಬುಡಾವಣೆ, ಹರಿಹರ ನಗರ |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಆರೋಪಿತರು ಗೊತ್ತಿಲ್ಲ. ನನಗೆ ರತ್ನಮ್ಮ ಗೊತ್ತಿಲ್ಲ. ಅವರಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಅವಳ ಗಂಡನ ಹೆಸರು ಗೊತ್ತಿಲ್ಲ. ಮೃತ ಕುಮಾರ ಗೊತ್ತಿಲ್ಲ. ಈ ಕೇಸಿಗೆ ಸಂಬಂಧಪಟ್ಟಂತೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ಆರೋಪಿತರು ಮತ್ತು ರತ್ನಮ್ಮ ಇವರ ಮಧ್ಯ ಆಸ್ತಿ ವಿಚಾರ ಸಲುವಾಗಿ ಸಣ್ಣಪುಟ್ಟ ಜಗಳವಾಗುತ್ತಿದ್ದು, ರತ್ನಮ್ಮ ಇವರು ವಾಸವಾಗಿರುವ ಮನೆ ಅವರ ಹೆಸರಿಗಿದ್ದು, ಮೊದಲನೇ ಹೆಂಡತಿ ಮಕ್ಕಳಾದ ಪಕ್ಕೀರಪ್ಪ, ಪ್ರಸಾದ, ಶಾಂತ ಕುಮಾರ ಇವರೆಲ್ಲರೂ ಸೇರಿ ಹರಿಹರ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣ ಹಾಕಿದ ವಿಚಾರ ಗೊತ್ತು ಈ ವಿಚಾರದ ಸಲುವಾಗಿ ಆರೋಪಿತರು ಆಗಾಗ ಪಕ್ಕೀರಪ್ಪ ಇವರಿಗೆ ತೂಂದರೆ ಕೊಡುತ್ತಿದ್ದು , ನಂತರ 14-05-2023 ರಂದು ಆರೋಪಿತರು ಕುಮಾರ ಈತನನ್ನು ಕೊಲೆ ಮಾಡುವ ವಿಚಾರ

ಗೊತ್ತಾಯಿತು ಎಂಬ ಬಗ್ಗೆ ನಿಪಿ–67 ರಂತೆ ಹೇಳಿಕೆ ನೀಡುತ್ತಿದೇನೆ ಎನ್ನುವುದು ಸುಳ್ಳು . ಈ ವಿಷಯ ಗೊತ್ತಿದ್ದು ಆರೋಪಿತರರಿಗೆ ಸಹಾಯವಾಗಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲು:–</u> ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.